Chapter-4

# ಅಧ್ಯಾಯ–4

# ಜನಪದ ಅರೆರಂಗ ಕಲೆಗಳು

## (ವಾದ್ಯಪ್ರಧಾನ)

1. ಗುಮಟೆವಾದನ
2. ಸಿದ್ದಿಯರ ಡಮಾಮಿ

# 1. ಗುಮಟೆವಾದನ

**ಉ**ತ್ತರ ಕನ್ನಡ ಜಿಲ್ಲೆಯ ವಿಶಿಷ್ಟ ವಾದ್ಯ **ಗುಮಟೆ**. ಹಾಲಕ್ಕಿಗಳು, ಅಂಬಿಗರು, ಕೋಮಾರಪಂತರು, ಸಿದ್ದಿಗಳು, ಮಹಾಲೆಗಳು, ಕುಣಬಿಗಳು, ಮರಾಠಿಗರು ಹೀಗೆ ಅನೇಕ ಜನಾಂಗಗಳು ಗುಮಟೆಯೊಂದಿಗೆ ಬದುಕಿವೆ. ಎಲ್ಲಾ ಆದಿಮಕಲೆಗಳಲ್ಲಿ ಕಂಡುಬರುವಂತೆ ಉತ್ತರ ಕನ್ನಡದಲ್ಲಿಯೂ ಸಹ ಮಣ್ಣು ಚರ್ಮದಿಂದಾದ ಗುಮಟೆ ವಾದ್ಯವನ್ನು ಬಳಸುತ್ತಾರೆ. ಆದರೆ ಇಲ್ಲಿಯ ವಿಶಿಷ್ಠ ಪ್ರಕೃತಿ – ಪರಿಸರಕ್ಕೆ ಅನುಗುಣವಾಗಿ ಗುಮಟೆಯ ಆಕಾರ ಹಾಗೂ ವಾದನಕ್ರಮದಲ್ಲಿ ವ್ಯತ್ಯಾಸಗಳು ಕಂಡುಬರುತ್ತವೆ. ಇದೇರೀತಿ ಪ್ರದರ್ಶನ ಕ್ರಮ ಹಾಗೂ ಉದ್ದೇಶಗಳಲ್ಲಿಯೂ ವ್ಯತ್ಯಾಸಗಳಿವೆ. ಹಾಲಕ್ಕಿಗಳಿಗೆ ಹಾಗೂ ಸಿದ್ದಿಗಳಿಗೆ ಈ ವಾದ್ಯ ಮನರಂಜನೆ ಉದ್ದೇಶದ ಪ್ರದರ್ಶನಕಲೆಯಾದರೆ, ಮಹಾಲೆ ಜನಾಂಗದವರಲ್ಲಿ ಈ ವಾದ್ಯ ಚೌತಿ ಹಬ್ಬದ ಆಚರಣೆಯ ಜತೆ ತಳಕು ಹಾಕಿಕೊಂಡಿದೆ. ಹಾಲಕ್ಕಿಗಳಲ್ಲಿ ಗುಮಟೆ ಸ್ವತಂತ್ರವಾದ ವಾದ್ಯವಾದರೆ ಖಾರ್ವಿ, ಮಹಾಲೆ, ಸಿದ್ದಿ , ಮರಾಠಾ, ಈ ಜನಾಂಗಗಳಿಗೆ ಅದು ತಾಸಮಾರ್ ಎಂಬ ವಾದ್ಯದೊಂದಿಗೆ ಸೇರಿ ನುಡಿಗೊಳ್ಳಬೇಕಾದ ವಾದ್ಯ..

**ಗುಮಟೆ ಎಂಬುದು** ಈ ವಾದ್ಯವು ಹೊಮ್ಮಿಸುವ ಧ್ವನಿಯಿಂದಾಗಿ ನಿಷ್ಪತ್ತಿಗೊಂಡಿರಬೇಕು. ಈ ವಾದ್ಯದ ಚರ್ಮ ಕಟ್ಟಿದ ಭಾಗದಲ್ಲಿ ಎರಡು ಪ್ರದೇಶವನ್ನು ನಾವು ಗುರುತಿಸಬಹುದು. ಮಧ್ಯದ ಭಾಗ ಮತ್ತು ಅಂಚಿನ ಭಾಗ ಮಧ್ಯದ ಭಾಗವನ್ನು ಹಸ್ತದಿಂದ 'ತಾಡನ' ಮಾಡಿದರೆ 'ಗುಂವ್' ಎಂಬ ನಾದ, ಅಂಚಿನಲ್ಲಿ ಹೊಡೆದರೆ ಟಕ್ ಎನ್ನುವ ನಾದ ಹೊರಬರುತ್ತದೆ. (ಈ ಹಂತದಲ್ಲಿ ಇನ್ನೊಂದು ಕಡೆಯಿಂದ ಬಾಯಿಯನ್ನು ಮುಚ್ಚಿ ತೆರೆವ ಕಾರ್ಯವೂ ನಡೆದಿರುತ್ತದೆ.) ಹೀಗೆ ಈ 'ಗುಂ' ಮತ್ತು 'ಟಕ್' ಎನ್ನುವ ನಾದದಿಂದಾಗಿ ಈ ವಾದ್ಯಕ್ಕೆ 'ಗುಮಟೆ' ಎಂಬ ಹೆಸರು ಬಂದಿರುವ ಸಾಧ್ಯತೆ ಇದೆ. ಅಂದರೆ 'ಗುಮಟೆ'ಎಂಬುದು ಅನುಕರಣವಾಚಿಕ ಪದವಾಗಿರಬಹುದು.[1]

## ವಾದ್ಯದ ರೂಪ ರಚನೆ

ಗುಮಟೆ ಸಿಲೆಂಡರಿನಾಕಾರ ಮತ್ತು ಕೊಡದ ಆಕಾರದಲ್ಲಿರುತ್ತದೆ. ಇದರಲ್ಲಿ ಗುಮಟೆ ಮತ್ತು ಪಾಂಗು ಎಂಬ ಎರಡು ಮುಖ್ಯವಾದ ಪ್ರಕಾರಗಳಿವೆ. ಅದಕ್ಕೆ ಅನುಸಾರವಾಗಿ ಹಾಡುವ ಸಾಹಿತ್ಯ ಕಾಲ ಸ್ಥಳ ಎಲ್ಲವೂ ಬೇರೆ ಬೇರೆ ಯಾಗುತ್ತದೆ. ಗುಮಟೆ ಹಾಡಿನ ಕಾಲ, ಸ್ಥಳ, ಸಾಹಿತ್ಯವೇ ಬೇರೆ, ಪಾಂಗಿನ ಪಠ್ಯವೇ ಬೇರೆ. ಒಂದೇ ಮೂಲದ ವಾದ್ಯವೊಂದು ಬಳಕೆಯ ವ್ಯತ್ಯಾಸದ ಕಾರಣ ಭಿನ್ನ ಪ್ರದರ್ಶನಕ್ಕೆ ಕಾರಣವಾಗಿ ಬಿಡುತ್ತದೆ.

ಸಿಲಿಂಡರಿನಾಕಾರ ಅಥವಾ ಹೂಜೆಯಾಕಾರದಲ್ಲೂ ಉದ್ದದ ವ್ಯತ್ಯಾಸದಿಂದ 'ಕೋಲುಗುಮಟೆ' ಎಂಬ ಇನ್ನೊಂದು ಪ್ರಕಾರವನ್ನೂ ಮಾಡುತ್ತಾರೆ. ಕೆಲವೆಡೆ ಸುಗ್ಗಿಯ ಕೋಲು ಪದವನ್ನು ಹಾಡುವಾಗ ಇದನ್ನು ಬಾರಿಸಲಾಗುತ್ತದೆ.[2] ಹೀಗೆ ಗುಮಟೆ ವಾದ್ಯದಲ್ಲಿ 3 ಪ್ರಕಾರವನ್ನು ಮಾಡಬಹುದು.

| | |
|---|---|
| ಗುಮಟೆಯ ಉದ್ದ (ಸುಮಾರಾಗಿ) | 2 ರಿಂದ 2.5 ಫೂಟ್ |
| ಪಾಂಗಿನ ಉದ್ದ | 1 ರಿಂದ 1.5 ಫೂಟ್ |
| ಕೋಲು ಗುಮಟೆ | 3 ಫೂಟ್ |

ಇಷ್ಟು ದೊಡ್ಡದಾದ ಮಣ್ಣಿನ ಮಡಕೆಯನ್ನು ಚೆನ್ನಾಗಿ ಸುಟ್ಟು ತುಂಬ ಗಟ್ಟಿ ಗೊಳಿಸಿರುತ್ತಾರೆ. ಹಾಗೇ ಸುಟ್ಟ ಮಡಕೆಗೆ ಹೊಡೆದರೆ 'ಠಣ್' ಎಂಬ ಶಬ್ದಬರುತ್ತದೆ. ಅದರ ಒಂದು ಭಾಗ ಅಗಲವಾಗಿಯೂ ಇನ್ನೊಂದು ಭಾಗ ಕಿರು ಅಗಲವಾಗಿಯೂ ಅಂದರೆ ಒಂದು 'ಹಸ್ತ' ಮುಚ್ಚುವಷ್ಟು ಇರುತ್ತದೆ. ಅಗಲವಾದ ಬಾಯಿಗೆ ಉಡದ ಅಥವಾ ಕಾನಕುರಿಯ ಚರ್ಮ ಹದಮಾಡಿ ಕಟ್ಟಲಾಗುತ್ತದೆ.

ಇದನ್ನು ವಾದನ ಮಾಡುವ ಕ್ರಮ ಸ್ವಲ್ಪ ಸ್ವಲ್ಪ ವ್ಯತ್ಯಾಸದಿಂದ ಬೇರೆ ಬೇರೆ ರೂಢಿಯಲ್ಲಿದೆ. ನಾನಿಲ್ಲಿ ಹಾಲಕ್ಕಿಗಳ, ಮರಾಠಿಗರ ಮತ್ತು ಸಿದ್ದಿಗಳ ಗುಮಟೆ ವಾದನ ಕ್ರಮವನ್ನು ದಾಖಲಿಸುತ್ತಿದ್ದೇನೆ.

## ಹಾಲಕ್ಕಿ ಗುಮಟೆ

ಹಾಲಕ್ಕಿಗಳಲ್ಲಿ ಈ ಗುಮಟೆ ಅವರ ಎಲ್ಲ ಆಚರಣೆಗೂ ಅವಶ್ಯ. ಪಾನಕ ಪೂಜೆ, ಹಗರಣ, ಸುಗ್ಗಿ ಹೀಗೆ ಎಲ್ಲಡೆ ಇದನ್ನು ಬಳಸುತ್ತಾರೆ. ಇವರಲ್ಲಿ 'ಗುಮಟೆ ಪದ' ಅಂದರೆ ಗುಮಟೆಯನ್ನೇ ಆಧಾರವಾಗಿಟ್ಟುಕೊಂಡು ಹೇಳಲಾಗುವ ಹಾಡು ಎಂದರ್ಥ ಮಾತ್ರವಲ್ಲ, ಆ ಸಂದರ್ಭದ ಕುಣಿತ, ಮಧ್ಯೆ ಮಧ್ಯೆ ಬೇಸರದ 'ಅದೆತನ' ಕಳೆಯಲು ಬಳಕೆಯಾಗುವ ಹಗಣ ಹೀಗೆ ಒಂದು ಪೂರ್ಣ ಪ್ರಮಾಣದ ಪ್ರದರ್ಶನವೇ ಆಗಿಬಿಡುತ್ತದೆ.

ಗುಮಟೆ ವಾದನಕ್ಕೆ ಅಪಾರ ಕಸುವು ಅಗತ್ಯ. ಹಾಲಕ್ಕಿಗಳ ಗುಮಟೆವಾದನದ ಬಗ್ಗೆ ಎನ್.ಆರ್.ನಾಯಕರು ಹೀಗೆ ಬರೆದಿದ್ದಾರೆ. "ಇದೊಂದು ಗಂಡುವಾದ್ಯ. ಇದನ್ನು ಬಾರಿಸಲು ಭೀಮಸೇನನ ರಟ್ಟೆಯ ಕಸುವು ಬೇಕಾಗುತ್ತದೆ. ಹಾಲಕ್ಕಿಗಳು ಈ ವಾದ್ಯವನ್ನು ಭೀಮಸೇನನಿಂದಲೇ ಪಡೆದದ್ದೆಂದು ಹೇಳುತ್ತಾರೆ. ಅದಕ್ಕೇ ಅವರಿಗೆ ಈ ವಾದ್ಯದ ಬಗ್ಗೆ ತುಂಬು ಗೌರವ. ಗುಮಟೆಯನ್ನು ಹಿಡಿಯುವಾಗ ಅಥವಾ ಇನ್ನೊಬ್ಬರಿಗೆ ಕೊಡುವಾಗ ಗುಮಟೆಗೆ ವಂದಿಸುತ್ತಾರೆ. ಕೈಯಲ್ಲಿ ಹಿಡಿದ ಗುಮಟೆಗೆ ಶರಣು ಎಂದು ಹಾಡಿ ಗೌರವ ಸೂಚಿಸುತ್ತಾರೆ."[2]

ಹಾಲಕ್ಕಿಗಳ ಗುಮಟೆ ವಾದನದಲ್ಲಿ ಅಂಕೋಲಾ ಸಂಪ್ರದಾಯ ಮತ್ತು ಹೊನ್ನಾವರ ಸಂಪ್ರದಾಯ ತುಸು ಬೇರೆ ಬೇರೆಯಾಗಿದೆ. ಈ ವ್ಯತ್ಯಾಸ ಪ್ರಮುಖವಾಗಿ ಗುಮಟೆವಾದಕರೊಡನೆ ಕುಣಿಯುವ 'ಕೂಚ' ಎಂಬ ಕುಣಿತಗಾರನಿಂದ ಬಂದಿದ್ದು. ಚಂದಾವರ ಸೀಮೆಯ ಅಥವಾ ಹೊನ್ನಾವರ ಸೀಮೆಯ ಗುಮಟೆ ಪ್ರದರ್ಶನದಲ್ಲಿ ಕುಣಿಯುವ ಕೂಚನಿಲ್ಲ. ಆತ ಅಂಕೋಲಾ ಸಂಪ್ರದಾಯದಲ್ಲಿದ್ದಾನೆ. ಹಾಡು ಹಾಗೂ ವಾದ್ಯದ ಗತಿಗನುಗುಣವಾಗಿ ಆತ ಕುಣಿಯುತ್ತಾನೆ. ವಾದ್ಯದ ಗತಿ ತೀವ್ರವಾದಾಗ 'ಚಬಾಚ್' ಎಂದು ವಾದಕರನ್ನು ಹುರಿದುಂಬಿಸುತ್ತ ಕುಣಿಯುತ್ತಾನೆ. ಈ ಕೂಚನ ವೇಷ ಮತ್ತು ಕುಣಿತಗಳು ಬೇರೆ ಬೇರೆ ಬಗೆಗಳಲ್ಲಿವೆ ಕುಚ್ಚು ಟೋಪಿ, ನಿಲುವಂಗಿ ಪಾಯಿಜಾಮ ಹಾಕಿ ಯಕ್ಷಗಾನದ ಕೋಡಂಗಿ ರೂಪದ ವೇಷವನ್ನು ಕೆಲವಡೆ ಮಾಡುತ್ತಾರೆ. ಎರಡೂ ಕಾಲುಗಳನ್ನೆತ್ತಿ ಹಾರುವದು, ಕಾಲುಗಳನ್ನು ಹತ್ತಿರಕ್ಕೆ ಜೋಡಿಸುವುದು ಮತ್ತು ಅಗಲಗೊಳಿಸುವದು ಈ ಕ್ರಿಯೆಗಳನ್ನು ವಾದ್ಯದ ಲಯಕ್ಕನುಗುಣವಾಗಿ ಮಾಡುತ್ತಾರೆ. ಈ ಕುಣಿತಕ್ಕೆ ಮತ್ತು ಅವರ ಸಾಹಿತ್ಯಕ್ಕೆ ಯಾವ ಸಂಬಂಧವೂ ಇಲ್ಲ. ಇನ್ನು ಕೆಲವಡೆ ವಿಶೇಷ ವೇಷಭೂಷಣಗಳಿಲ್ಲದೇ ಆದರೆ ತಲೆಗೆ ರುಮಾಲು, ಮೈಗೆಕೋಟು ಧರಿಸಿ, ಯಕ್ಷಗಾನ ಲಯಗಾರಿಕೆಯ ಗತ್ತು, ಸಾಹಿತ್ಯದ ಅಭಿನಯ ಇವುಗಳನ್ನು ಮೇಳೈಸಿಕೊಂಡು ಪ್ರದರ್ಶನ ನೀಡುವ 'ಕೂಚ' ಗಳೂ ಇದ್ದಾರೆ.

ಗುಮಟೆ ವಾದನಕ್ಕೆ ಕನಿಷ್ಠ ನಾಲ್ಕು ಜನ, ಒಬ್ಬ ತಾಳ ಬಾರಿಸುವವ ಬೇಕು. ಒಂದು ಸಾಲಿನಲ್ಲಿ ಅವರೆಲ್ಲ ನಿಂತಿರುತ್ತಾರೆ. ಅವರ ಪಕ್ಕ ತಾಳ ಬಾರಿಸುವವ ನಿಲ್ಲುತ್ತಾನೆ. ಸಾಲಿನಲ್ಲಿ ಮೊದಲಲ್ಲಿ ನಿಂತಿರುವ ಮುಖ್ಯ ಹಾಡುಗಾರ ಗುಮಟೆ ಬಾರಿಸುತ್ತ ಹಾಡಿನ ಒಂದು ಸೊಲ್ಲನ್ನು ಹೇಳುವನು. ಉಳಿದವರು ಅದನ್ನು ಪುನರಾವರ್ತಿಸುವರು. ಹಾಡಿನ 5–6 ಸಾಲುಗಳು ಅಥವಾ ಅದರ ಒಂದು ಘಟಕ, ಅದು ಪಲ್ಲವಿಯೋ , ದೀರ್ಘ ಕಥಾನಕದಲ್ಲಿ ಒಂದು ಸಂದರ್ಭವೋ ಹೀಗೆ ಯಾವುದೂ ಆಗಬಹುದು, ಅದು ಮುಖ್ಯ ಹಾಡುಗಾರನ ಮರ್ಜಿಗೆ ಬಿಟ್ಟಿದ್ದು, ಅದು ಮುಗಿದ ಕೂಡಲೇ 'ಮುರುಗಡಿ' ಮಾಡಲಾಗುತ್ತದೆ. ಒಂದೇ ಬಗೆಯ ಬಾರಿಸುವಿಕೆಯ 'ನಡೆ' ನಿಂತು ತಾಳ ಮುರಿದು ತೀವ್ರವಾಗಿ ಅದನ್ನ ಬಾರಿಸುತ್ತಾ ಕೊನೆ ಮಾಡಲಾಗುತ್ತದೆ. ನಂತರ ಮೊದಲಿನಂತೆ 'ನಡೆ' ಆರಂಭ. ಹೀಗೆ ಗುಮಟೆ ವಾದನ ಕ್ರಮದಲ್ಲಿ ಆರಂಭ, ನಡೆ, ಮುರಗಡಿ, ಮುಕ್ತಾಯ ಹೀಗೆ ನಾಲ್ಕು ಹಂತಗಳಿರುತ್ತವೆ.

## ಗುಮಟೆ ವಾದನದ ತಾಳವಿನ್ಯಾಸ

ಗುಮಟೆಯ ತಾಳ ವಿನ್ಯಾಸವನ್ನು ಗುರುತಿಸಲು ನಾನು ಮೂರು ಪ್ರದರ್ಶನಗಳನ್ನು ಆಧಾರವಾಗಿ ತೆಗೆದುಕೊಂಡಿದ್ದೇನೆ (ಪ್ರದರ್ಶನದ ರೆಕಾರ್ಡಿಂಗ್ , ವಾದಕರ ಜತೆಗೆ ಚರ್ಚೆ ಮತ್ತು ತಾಳಜ್ಞಾನವುಳ್ಳ ತಜ್ಞರ ಜತೆ ಚರ್ಚಿಸಿ ಈ ವಿನ್ಯಾಸ ಗುರುತಿಸಿದ್ದೇನೆ )

**ಪ್ರದರ್ಶನ. 1. 'ವಂದೂರು' ಹಾಲಕ್ಕಿ ಒಕ್ಕಲಿಗರ ಗುಮಟೆ**

ಇವರ ಗುಮಟೆ ವಾದನದಲ್ಲಿ 8 ಮಾತ್ರಾಕಾಲದ ರಚನೆಯಲ್ಲಿ 7 ತಾಳ ಅಥವಾ 7 ಪೆಟ್ಟುಗಳು ಇರುತ್ತವೆ.

1,2,3,4,5,6,7,8' ಮಾತ್ರಾಕಾಲ '1,2,3,4,5,6,7–' ಪೆಟ್ಟುಗಳು. ಈ ತಾಳಗಳು ಹಾಡಿನುದ್ದಕ್ಕೂ ಒಂದೇರೀತಿ ಅನುವರ್ತಿತವಾಗುತ್ತದೆ. ಮುಕ್ತಾಯದ ಮೊದಲು ಒಂದು 'ಸೂಚನೆ' . ಆ 'ಸೂಚನೆ'ಯಲ್ಲಿ 8 ಮಾತ್ರಾಕಾಲದಲ್ಲಿ 5 ತಾಳಗಳನ್ನು ಹೊಡೆದು , ನಂತರ 6 ತಾಳಗಳನ್ನು 8 ಮಾತ್ರೆಯ ಕಾಲದಲ್ಲಿ 5 ಬಾರಿ ಪುನರಾವರ್ತನೆಗೊಳಿಸಿ ಮುಕ್ತಾಯ ಮಾಡಲಾಗುವದು.

| ಎಂಟು ಮಾತ್ರಾ ಕಾಲ | I | II | III | IV | V | VI | VII | VIII |
|---|---|---|---|---|---|---|---|---|
| ಪುನರಾವರ್ತಿತ ತಾಳ ಏಳು. (ಚಲನೆ) | 1 | 2 | 3 | 4 | 5 | 6 | 7 | ~ |
| ಮುಕ್ತಾಯ ಸೂಚನೆ (ಮುರಗಡಿ) | 1 | ~ | ~ | 2 | 3 | 4 | 5 | ~ |
| ಮುಕ್ತಾಯ | 1 | 2 | 3 | 4 | 5 | ~ | 6 | ~ |
| (5 ಬಾರಿ ಆವರ್ತನ ) | 1 | ~ | 2 | 3 | 4 | 5 | 6 | ~ |
| | 1 | 2 | 3 | 4 | 5 | 6 | ~ | ~ |
| | 1 | ~ | 2 | 3 | 4 | 5 | 6 | ~ |
| | 1 | ~ | ~ | 2 | 3 | 4 | 5 | ~ |

ಇಲ್ಲಿ ರೋಮನ್ ಅಂಕೆಗಳು ಮಾತ್ರಾ ಕಾಲವನ್ನು, 1,2,3, ಈ ರೀತಿಯ ಅಂಕೆಗಳು ತಾಳಗಳನ್ನು ಅಥವಾ ಪೆಟ್ಟುಗಳನ್ನು ಸೂಚಿಸಿದರೆ '–' ಈ ಗೆರೆ, ಪೆಟ್ಟು ಇಲ್ಲದ ಹುಸಿ ಅಥವಾ ಸ್ವರ ಎಳೆಯುವ ಸೂಚನೆಯನ್ನು ನೀಡುತ್ತದೆ.

ತಬಲಾವಾದನದಲ್ಲಿ ತಾಳಗಳನ್ನು, ಪೆಟ್ಟುಗಳನ್ನು 'ಬೋಲ್'ಗಳಲ್ಲಿ ಹೇಳಲಾಗುತ್ತದೆ. ಗುಮಟೆಯ ಈ ತಾಳ ವಿನ್ಯಾಸವನ್ನು 'ಬೋಲ್'ನಲ್ಲಿ ಹೇಳುವುದಾದರೆ ಹೀಗೆ ಹೇಳಬಹುದು.

| ಪುನರಾವರ್ತಿತ ತಾಳಗಳು | 1 | 2 | 3 | 4 | 5 | 6 | 7 | 8 |
|---|---|---|---|---|---|---|---|---|
| | ದ | ಗೆ | ನ | ತ | ಕೆ | ನ | ದಾ | ಗೆ |

| | | | | | | | | |
|---|---|---|---|---|---|---|---|---|
| ಮುಕ್ತಾಯ | | | | | | | | |
| ಸೂಚನೆ | 1 | 2 | 3 | 4 | 5 | 6 | 7 | 8 |
| | ದ | ~ | ~ | ದ | ಗೆ | ನ | ದ | ~ |
| ಮುಕ್ತಾಯದ 5 | | | | | | | | |
| ಆವರ್ತನಗಳು | 1 | 2 | 3 | 4 | 5 | 6 | 7 | 8 |
| | ದ | ಗೆ | ನ | ದ | ದ | ~ | ದ | ~ |
| | ದ | ~ | ದ | ಗೆ | ನ | ದ | ಗೆ | ~ |
| | ದ | ಗೆ | ನ | ದ | ಗೆ | ನ | ~ | ~ |
| | ದ | ~ | ದ | ಗೆ | ನ | ದ | ಗೆ | ~ |
| | ದ | ~ | ~ | ದ | ಗೆ | ಗೆ | ದ | ~ |

**ಪ್ರದರ್ಶನ 2 ಅಗ್ರಹಾರ ಹಾಲಕ್ಕಿ ಒಕ್ಕಲಿಗರು**

ಇವರ ಗುಮಟೆ ವಾದನದಲ್ಲಿ ಎರಡು ಬಗೆಯ ತಾಳ ವಿನ್ಯಾಸಗಳಿವೆ. ಅದನ್ನು ಆರುಕೈ ಮತ್ತು ಮೂರುಕೈ ಎಂದು ಕರೆಯಲಾಗುತ್ತದೆ. 8 ಮಾತ್ರಾ ಕಾಲ 5 ಮತ್ತು 6 ತಾಳಗಳ ವಿನ್ಯಾಸ ಇರುತ್ತದೆ.

1) **ಆರು ಕೈ**

ಇಲ್ಲಿ ಆರಂಭದ ಆವರ್ತನ ಪೆಟ್ಟುಗಳು

1 2 ~ 3 4 5 6

ಮುಕ್ತಾಯ ಸೂಚನೆ

1 2 3 4 5

ಮುಕ್ತಾಯದ ಪೆಟ್ಟುಗಳು

1 2 3 4 5 6 7 8

2) **ಮೂರು ಕೈ**

ಇಲ್ಲಿ ಪೆಟ್ಟು 3 ಮಾತ್ರೆಯ ಕಾಲದಲ್ಲಿ 3 ಪೆಟ್ಟುಗಳ ಆವರ್ತನ. ಮುಕ್ತಾಯದಲ್ಲಿ 5 ಪೆಟ್ಟುಗಳು 5 ಮಾತ್ರಾಕಾಲದಲ್ಲಿ 3 ಬಾರಿ ನುಡಿಸಲ್ಪಟ್ಟು, 6 ಮಾತ್ರಾಕಾಲದಲ್ಲಿ 6 ಪೆಟ್ಟುಗಳೊಂದಿಗೆ ಮುಕ್ತಾಯ. ಈ "ಕೈ" ಹೊಡೆತದಲ್ಲಿ ಮಾತ್ರಾಕಾಲ ಮತ್ತು ತಾಳಗಳು ಅವಿನಾಭಾವವಾಗಿರುವುದು. ತಾಳ ಮತ್ತು ಮಾತ್ರೆಯ

ಆಧಾರದಲ್ಲಿ ಇದರ ವಿನ್ಯಾಸ ಹೀಗಿದೆ.

ಪುನರಾವರ್ತಿತ ತಾಳಗಳು

1 2 3

1 2 3

1 2 3

ಮುಕ್ತಾಯದಲ್ಲಿ

1 2 3 4 5

1 2 3 4 5

1 2 3 4 5

1 2 3 4 5 6

ತತ್ವಪದಗಳನ್ನು ಬಾರಿಸುವಾಗ ಈ 'ಕೈ' ಉಪಯೋಗಿಸಲಾಗುತ್ತದೆ.

**ಪ್ರದರ್ಶನ . 3. ತೊಳಸಾಣಿಯ ಮರಾಠಿ ಜನಾಂಗದವರು**

ಇವರ ಗುಮಟೆವಾದನದಲ್ಲಿ ಎರಡು ಪಾರಿಭಾಷಿಕ ಪದಗಳಿವೆ.

1 **ಉಡತಿ ಹಾತ್**

2 **ಚಾಲತಿ ಹ್ತ್**

**<u>ಉಡತಿ ಹಾತ್</u>** : ಇದು ವಾದ್ಯದ ವಾದನಾರಂಭ. ಇಲ್ಲಿ ಜೋರಾಗಿ 3 ಮಾತ್ರೆ ಕಾಲದ 3 ಪೆಟ್ಟುಗಳನ್ನು ಎರಡು ಬಾರಿ ಹೊಡೆದು ನಂತರ ಮೂರನೇ ಭಾರಿ 5 ಮಾತ್ರೆಯ 5 ಪೆಟ್ಟುಗಳನ್ನು ( ಒಂದು ಬಾರಿ ) ಹೊಡೆಯಲಾಗುವದು ನಂತರ ಹಾಡಿನ ನಡಿಗೆಯ ವಾದನ ಆರಂಭ.

**ಚಾಲತಿ ಹಾತ್**: ಹಾಡನ್ನು ಮುಂದುವರಿಸಲು ಬಾರಿಸುವದು. 4 ಮಾತ್ರೆಯ ಕಾಲದ 4 ಪೆಟ್ಟುಗಳು.

ಮುಕ್ತಾಯದಲ್ಲಿ 5 ಮಾತ್ರೆಯ 5 ಪೆಟ್ಟುಗಳನ್ನು 3 ಬಾರಿ ನುಡಿಸಲಾಗುವದು . ಒಟ್ಟು ವಿನ್ಯಾಸ ಹೀಗಿವೆ.

ಒಟ್ಟೂ ಐದು ಮಾತ್ರಾ ಕಾಲಗಳು

ತಾಳ ವಿನ್ಯಾಸ

ಆರಂಭ (ಉಡತಿ)

1 2 3

1 2 3

1 2 3 4 5

ಆವರ್ತನ (ಚಾಲತಿ)

1 2 3 4

ಮುಕ್ತಾಯ

1 2 3

1 2 3

1 2 3 4 5

ಗುಮಟೆವಾದ್ಯದ ತಾಳ ವಿನ್ಯಾಸಗಳು ಪದ್ಯದ ವಿನ್ಯಾಸವನ್ನು ಅವಲಂಬಿಸಿರುತ್ತದೆ. ಬಹುತೇಕವಾಗಿ 8, 6, 3 ಮಾತ್ರೆಗಳಲ್ಲಿ ಈ ವಿನ್ಯಾಸಗಳು ಹರಿದಾಡುತ್ತವೆ. ದೀರ್ಘಕಥಾನಕಗಳು 8 ಮಾತ್ರಾಕಾಲವನ್ನು ತೆಗೆದುಕೊಂಡರೆ 'ತುಂಡು' ಪದ್ಯಗಳು , ಭಜನೆ ಇವೆಲ್ಲಾ 6, 3, ಮಾತ್ರೆಗಳ ಕಾಲವನ್ನು ಆಧರಿಸಿರುತ್ತವೆ.

ಸೊಲ್ಲು ಹೇಳಿ ಪಲ್ಲವಿ ತೆಗೆದುಕೊಳ್ಳುವಾಗ ಮತ್ತು ಪಲ್ಲವಿ ಮುಗಿಸುವಾಗ 'ಮುರಗಡಿ', ತಾಳ ಮುರಿಯುವುದು ಇರುತ್ತದೆ. 'ಸೊಲ್ಲು:' ಹೇಳುವಾಗ ಯಾವ ಲಯದಲ್ಲಿ 'ಪೆಟ್ಟು'ಗಳು ಇರುತ್ತವೋ, ಮುರುಗಡಿ ಮಾಡುವಾಗ ಅದರ ಎರಡು ಪಟ್ಟು ತೀವ್ರಲಯದಲ್ಲಿ ಪೆಟ್ಟುಗಳನ್ನು ಬಾರಿಸುತ್ತಾರೆ.

ಹಾಡಿನ ಒಂದನೇ ಸಾಲಿನ ಮಾತ್ರೆಯನ್ನು ಅವಲಂಬಿಸಿ, ಆದರ ಎರಡು ಪಟ್ಟು ಮಾತ್ರೆಗಳಿಂದ ಮುರುಗಡಿ ಮತ್ತು ಮುಕ್ತಾಯ ಇರುತ್ತದೆ. 12 ಮಾತ್ರೆ ಹಾಡಿನ ಸಾಲು ಇದ್ದರೆ ಮುರುಗಡಿ 24 ಮಾತ್ರೆಯದು.

## ಗುಮಟೆ ಪದಗಳು

ಗುಮಟೆ ವಾದನದ ಜತೆ ಬೇರೆ ಬೇರೆ ಬಗೆಯ ಹಾಡುಗಳನ್ನು ಹಾಡಲಾಗುತ್ತದೆ. ಗುಮಟೆಯ ನಮನ, ಸ್ಥಳೀಯ ದೇವತೆಗಳ ಗುತ್ತುಗಳಿಗೆ ನಮನ ಹೀಗೆ ಎಲ್ಲರನ್ನೂ ವಂದಿಸಿ ಕಥಾನಕವನ್ನು ಹಾಡುತ್ತಾರೆ. ಹಿಂದೆಲ್ಲಾ ವಿರಾಮ ಕಾಲವನ್ನು ಆಧರಿಸಿ ವಾರಗಟ್ಟಲೆ ಗುಮಟೆ ಕಥಾನಕಗಳು ಮುಂದುವರಿಯುತ್ತಿದ್ದವು. ಇತ್ತೀಚೆಗೆ ಭಜನೆ , ಲಾವಣಿ ಹೀಗೆ ಎಲ್ಲ ಬಗೆಯ ಪದ್ಯಗಳನ್ನೂ ಗುಮಟೆ 'ಗತ್ತಿಗೆ' ಒಗ್ಗಿಸಲಾಗಿದೆ . ದಿನಕರ ದೇಸಾಯಿಯವರ ಸಾಹಿತ್ಯವೂ ಗುಮಟೆ ಮೂಲಕ ಪ್ರಸಾರವಾದದ್ದಿದೆ. ಕೆಲವೊಮ್ಮೆ ಹಾಡಿಲ್ಲದ, ವಾದನ ಮಾತ್ರವಿರುವ, ವಿವಿಧ ವಿನ್ಯಾಸದಲ್ಲಿ ನಾಲ್ಕೈದು ಮಂದಿ ಬರೇ ಗುಮಟೆ ಭಾರಿಸುವುದುಂಟು. ಅದನ್ನು 'ಹೊಡಿಗುಮಟೆ' ಎನ್ನಲಾಗುತ್ತದೆ. ಪ್ರದರ್ಶನಗಳಲ್ಲಿ ಸಾಹಿತ್ಯ ಆದರ ಒಂದು ಅಂಗ.

ಗುಮಟೆವಾದ್ಯ, ಹಾಡುಗಾರರಿಗೆ ಶ್ರುತಿಯೂ ತಾಳವೂ ಆಗಿ ಒದಗಿ ಬರುತ್ತದೆ. ವಾದಕರೇ ಗಾಯಕರಾಗಿರುವದರಿಂದ ಶ್ರುತಿ, ಲಯ ಒಂದೇ ಮೂಲದವಾಗಿರುತ್ತದೆ. ಹಾಗೆ ಅದಕ್ಕೆ ಒಗ್ಗುವ ಒಪ್ಪುವ ಸಾಹಿತ್ಯ ಬಳಕೆಯಾಗುತ್ತದೆ. ಅಲ್ಲದೇ ಹಬ್ಬ, ಪಾನಕ ಪೂಜೆ , ಹಗಣ, ಸುಗ್ಗಿ– ಹೀಗೆ ಬೇರೆ ಬೇರೆ ಸಂದರ್ಭಗಳು ಸಾಹಿತ್ಯದ ಮೇಲೆ ಪರಿಣಾಮ ಬೀರುತ್ತದೆ. ಧೀರ್ಘ ಕಥಾನಕಗಳನ್ನು ಹಾಡುವ ರೂಢಿ ಇಂದು ತಪ್ಪಿದ್ದರಿಂದ ಚಿಕ್ಕಚಿಕ್ಕ ಹಾಡುಗಳು ಬಳಕೆಯಾಗುತ್ತದೆ. ಅವರ ಬದುಕು, ಬವಣೆ, ನಂಬುಗೆ ಇವೆಲ್ಲ ಅವರ ಗುಮಟೆ ಹಾಡುಗಳಾಗಿವೆ. ಒಂದು ಉದಾಹರಣೆಯನ್ನು ನೋಡಬಹುದು.

"ಭತ್ತದ ಚೀಲ ಲೇವಿಗೋಯ್ತು ತಂಗಿ ತಂಗಿ
ಅನ್ನದ ಬಟ್ಲಕೆ ಕಂಟ್ರೋಲಾಯ್ತ ಅಣ್ಣ ಅಣ್ಣ
ಆಂಗ್ಡಿ ಅಕ್ಕಿ ತುಟ್ಟಿ ಆಯ್ತು ತಂಗಿ ತಂಗಿ
ಬಡವರ ಗೋಳು ಬಾಳಟ್ಟಾಯ್ತು ಅಣ್ಣ ಅಣ್ಣ
ಅಯ್ಯೋ ಸಾಯುಕಾರು ಸವಲ್ತತ್ತಿಲ್ಲ ತಂಗಿ ತಂಗಿ
ಮಕ್ಳು ಮರಿಗೆ ಉಪಾಸಲ್ಲೊ ಅಣ್ಣ ಅಣ್ಣ
ಸಾವ್ಕಾರ ಮಕ್ಕೀಗ್ ಹೋಳ್ಗೆ ತುಪ್ಪ ತಂಗಿ ತಂಗಿ"3

## ಗುಮಟೆ – ಪಾಂಗು

ಹಾಲಕ್ಕಿಗಳಲ್ಲಿ 'ಪಾಂಗು' ಎಂಬ ವಾದ್ಯವಿದೆ ಅದು ಚಿಕ್ಕ ಗುಮಟೆ. ಗುಮಟೆಗಳು ಆಕಾರಕ್ಕೆ ತಕ್ಕಂತ ಸ್ವರಗಳನ್ನು ಪಡೆಯುತ್ತದೆ. ದೊಡ್ಡ ಗುಮಟೆ ಮಂದ್ರ ಮತ್ತು ಮಧ್ಯ ಸಪ್ತಕಗಳ ಸ್ವರವನ್ನು ಹೊಂದಿದ್ದರೆ ಪಾಂಗು ತಾರಕ ಸ್ವರಪಡೆದಿರುತ್ತದೆ. ಸಾಂಪ್ರದಾಯಿಕ ಕಥಾನಕಗಳು ತುಂಬ ದೀರ್ಘವಾಗಿರುವದರಿಂದ ಧ್ವನಿಯನ್ನು ತುಂಬ

ಕಾಲದವರೆಗೂ ಕಾದು ಕೊಳ್ಳಬೇಕಾಗುತ್ತದೆ. ಆಗ ಮಂದ್ರ ಹಾಗೂ ಮದ್ಯ ಸಪ್ತಕದಲ್ಲಿಯೇ ಹಾಡಬೇಕಾಗುತ್ತದೆ. ಅದಕ್ಕೆ ದೊಡ್ಡ ಗುಮಟೆ ನೆರವಾಗುತ್ತದೆ.

ಗಣಪತಿ ಹಬ್ಬ, ಗದ್ದಲ ಸಡಗರದ ಉತ್ಸವಗಳಲ್ಲಿ ಹಾಡುವ ತುಂಡು ಪದಗಳಿಗೆ 'ಪಾಂಗು' ಸಹಕಾರಿ. ಆದರ ತಾರಕ ಶ್ರುತಿ, ತಾರಕ ಸ್ವರದ ಹಾಡುಗಳಿಗೆ ಯೋಗ್ಯ ಹಿಮ್ಮೇಳ ಒದಗಿಸುತ್ತದೆ. ಮಧ್ಯ ಮತ್ತು ಮಂದ್ರದ ಸ್ವರಗಳ ಕೇಳುವಿಕೆಗೆ ಪ್ರೇಕ್ಷಕನಿಗೆ ತಾಳ್ಮೆ, ಸಮಾಧಾನ, ವಿರಾಮ ಅಗತ್ಯ. 'ಪಾಂಗಿನ' ತಾರಕ ಸ್ವರ ಗದ್ದಲದಲ್ಲೂ ಗಮನ ಸೆಳೆಯುವದು.

## ಸಿದ್ದಿಯರ ಗುಮಟೆ

ಸಿದ್ದಿಯರ ಗುಮಟೆ ಮಡಕೆಯಾಕಾರದ್ದೇ ಆದರೂ ತುಂಬು ದೊಡ್ಡದು. ಅದರ ನಾದ ಸಹ ದೊಡ್ಡದೇ ಮನರಂಜನೆಯ ಮುಖ್ಯಸಾಧನವಾಗಿ ಗುಮಟೆ ಅವರಲ್ಲಿ ಬಳಕೆಯಲ್ಲಿದೆ. ಸ್ಥಳೀಯವಾಗಿ ಮುಖ್ಯ ಪ್ರವಾಹದಲ್ಲಿರುವ ಜನಾಂಗವನ್ನು ಅನುಕರಿಸುವ ಸಿದ್ದಿಗಳು ಆ ಜನಾಂಗದಲ್ಲಿ ರೂಢಿಯಲ್ಲಿರುವ ಗುಮಟೆ ಪದಗಳನ್ನೇ ತಾವೂ ಹಾಡುತ್ತಾರೆ. ಗುಮಟೆಗೇ ನಿರ್ದಿಷ್ಟವಾದ ಸಾಹಿತ್ಯ ಸಿದ್ದಿಯರಲ್ಲಿಲ್ಲ. ಆದರೆ ಅವರ ಗುಮಟೆಯನಾದ ಮಾತ್ರ ಮೈಲುದ್ದದವರೆಗೂ ಕೇಳುತ್ತದೆ.

## ಹಾಲಕ್ಕಿ ಮತ್ತು ಸಿದ್ದಿ ಗುಮಟೆ

ಇಲ್ಲಿ ನಾವು ಹಾಲಕ್ಕಿಗಳ , ಹೂಜೆಯಾಕಾರದ ಗುಮಟೆ ಮತ್ತು ಸಿದ್ದಿಯರ ಕೊಡದಾಕಾರದ ಗುಮಟೆಯ ಮೇಲೆ ಅವರ ಪರಿಸರ ಬೀರಿದ ಪ್ರಭಾವನ್ನು ಗಮನಿಸಬಹುದು. ಹಾಲಕ್ಕಿಗಳ ಹೂಜೆಯಾಕಾರದ ಉದ್ದ ಗುಮಟೆಯ ನಾದದ ಮೇಲೆ ಸಮುದ್ರದ 'ಘೋಷ'ದ ಪ್ರಭಾವವನ್ನೂ, ಸಿದ್ದಿಗಳ ಗುಮಟೆಯ ಮೇಲೆ ಕಾಡಿನ ಪ್ರಭಾವವನ್ನೂ, ಅದರ ನಾದದಿಂದಾಗಿ ಗುರುತಿಸಲು ಸಾಧ್ಯ. ಸಮುದ್ರದ ಅಲೆಗಳ ಏರಿಳಿತದ ನಾದದ ಪ್ರಭಾವ ಹಾಲಕ್ಕಿಗಳ ಗುಮಟೆ ಹಾಡಿನಲ್ಲಿದೆ. ಪದದ ಸಾಲಿನ ಕೊನೆಯ ಸ್ವರವನ್ನು ಏರಿಳಿಸುವ ರೀತಿ 'ಏ' ಮತ್ತು 'ಓ' ಸ್ವರವನ್ನು ಮಾರ್ಧನಿಸುತ್ತದೆ. ಸಾಗರದ ಅಲೆಗಳಲ್ಲಿ ಸಹ ಈ ಸ್ವರಗಳನ್ನು ಗಮನಿಸಬಹುದು.

ಕಾಡಿನಲ್ಲಿಯ ಅಗತ್ಯ ಕೂಗುವಿಕೆ, 'ಕುಹೂ' ಧ್ವನಿ, ಸಿದ್ದಿಯರ ಗುಮಟೆಯಲ್ಲಿ ಸ್ಥಾಯಿ ಸ್ವರವಾಗಿರುವದು ಆಕಸ್ಮಿಕವೇನಲ್ಲ.

## ಗುಮಟೆಯ ಸಾಧ್ಯತೆಗಳು

ಆಧುನಿಕ ವಾದ್ಯಗಳ ಬಳಕೆಯ ಚಿಂತನೆಯ ಹಿನ್ನೆಲೆಯಲ್ಲಿ ಗುಮಟೆ ವಾದ್ಯವನ್ನು ಹೀಗೂ ನೋಡಲು ಸಾಧ್ಯ ಎಂಬ ಗ್ರಹಿಕೆಯಿಂದ ಈ ವಿಚಾರಗಳನ್ನು ಮಂಡಿಸುತ್ತಿದ್ದೇನೆ.

'ತಬಲಾ' ವಾದ್ಯದ ಪರಿಭಾಷೆಯಲ್ಲಿ ಹೇಳುವದಾದರೆ ವಾದ್ಯದಲ್ಲಿ ಚಾಟಿ , ಮೈದಾನ, ಶಾಯಿ ಎಂಬ ಭಾಗವಿದೆ 'ಚಾಟಿ' ಅಂಚನ್ನು , 'ಮೈದಾನ' ಒಳಮೈಯನ್ನು ಸೂಚಿಸಿದರೆ ಮಧ್ಯದಲ್ಲಿ ಇರುವ ಸ್ವಲ್ಪ ಉಬ್ಬಾದ ಭಾಗ 'ಶಾಯಿ' ಎಂದು ಕರೆಯಲ್ಪಡುತ್ತದೆ. ಗುಮಟೆಯಲ್ಲೂ 'ಚಾಟಿ' ಮತ್ತು 'ಮೈದಾನ' ಎಂಬ ಎರಡು ಭಾಗಗಳನ್ನು ಗುರುತಿಸಬಹುದು. ಇವೆರಡೇ ಭಾಗವಿರುವದರಿಂದ ಹಸ್ತ ದಿಂದ ಅದನ್ನು ವಾದಿಸಲಾಗುತ್ತದೆ. ತಬಲದಲ್ಲೊ, ಮೃದಂಗದಲ್ಲೋ ಮಧ್ಯದ ಉಬ್ಬು ಭಾಗ (ಶಾಯಿ, ಬೋನ) ಇರುವದರಿಂದ ಹಸ್ತ ಮಾತ್ರವಲ್ಲದೇ ಬೆರಳುಗಳ ಹೊರಳಿಸುವಿಕೆ ಸಹ ಸಾಧ್ಯವಾಗುತ್ತದೆ. ಗುಮಟೆ ಸಹ ಈ ಉಬ್ಬು ಭಾಗವನ್ನು ಪಡೆದಲ್ಲಿ ವಾದನದ ಸಾಧ್ಯತೆಗಳು ಹೆಚ್ಚುತ್ತವೆ. ಹೀಗೆ ಮಾಡಿದಾಕ್ಷಣ ಗುಮಟೆಯನ್ನು ಇನ್ನೊಂದು ತಬಲಾವಾಗಿಸಿಯೋ, ಮೃದಂಗವಾಗಿಸಿಯೋ ಬಿಡುವದೆಂದಲ್ಲ. ಏಕೆಂದರೆ ಮೃದಂಗಕ್ಕೊ, ತಬಲಾಕ್ಕೋ ಇಲ್ಲದ ಒಂದು ಉತ್ತಮ ಸಾಧ್ಯತೆ ಈ ವಾದ್ಯಕ್ಕಿದೆ. ಅದೆಂದರೆ ವಾದ್ಯದ ಇನ್ನೊಂದೆಡೆ ತೆರವಾಗಿರುವದು. ಹಸ್ತಗಳ ಮುಚ್ಚುವಿಕೆ, ಅರೆ ಮುಚ್ಚುವಿಕೆ, ತೆರೆಯುವಿಕೆಯ ಸಹಾಯದಿಂದ ಬೇರೆ ಬೇರೆ ಧ್ವನಿ ವಿನ್ಯಾಸಗಳನ್ನು, ಬೆರಳುಗಳ ಹೊರಳಿಸುವಿಕೆಯಿಂದ ನಾದ ವಿನ್ಯಾಸದೊಡನೆ ಬಳಸಲು ಸಾಧ್ಯವೇ ಎಂಬುದನ್ನು ತಜ್ಞರು ಗಮನಿಸಬಹುದಾಗಿದೆ.

## ಆಧಾರ ಪಠ್ಯಗಳು

(1) ಕೇರಳದಲ್ಲಿ 'ನಂತುಣಿ' ಎಂಬ ವಾದ್ಯವಿದೆ. ಈ ವಾದ್ಯ 'ನಂ' ಎಂಬ ಪ್ರತಿಧ್ವನಿ ನೀಡುವದರಿಂದ 'ನಂತುಣಿ' ಎಂಬ ಹೆಸರು ಬಂದಿದೆ ಎಂದು ವಿದ್ವಾಂಸರು ಅಭಿಪ್ರಾಯ ಪಡುತ್ತಾರೆ. (ಪಳುಕಲ್ ಗಂಗಾಧರನ್ ನಾಯರ : ಕೇರಳ ಜಾನಪದ ಅಧ್ಯಯನ : ಜಾನಪದ ಮುತ್ತು ಯಕ್ಷಗಾನ ಅಕಾಡಮಿ ಬೆಂಗಳೂರು : 1998)

(2) ನಾಯ್ಕ ಎನ್,ಆರ್. : ಹಾಲಕ್ಕಿ ಒಕ್ಕಲಿಗರ ಸಂಸ್ಕೃತಿ : ಕರ್ನಾಟಕ ಸಾಹಿತ್ಯ ಅಕಾಡೆಮಿ ಬೆಂಗಳೂರು: 1993

(3) ನಾಯ್ಕ ಎನ್.ಆರ್. : ಹೇಳ್ತೇವ್ರೊ ಗುಮ್ಮೆ ಪದನಾವಾ : ಜಾನಪದ ಪ್ರಕಾಶನ ಹೊನ್ನಾವರ,1983.

## ಪ್ರದರ್ಶನ ಪಠ್ಯ

1. **ಹಾಲಕ್ಕಿ ಗುಮಟೆ**

- ಹೊನ್ನಾವರ ತಾಲೂಕಿನ ವಂದೂರು ಗ್ರಾಮದ ಹಾಲಕ್ಕಿಗಳ ಪ್ರದರ್ಶನ
- ಹೊನ್ನಾವರ ತಾಲೂಕಿನ ಅಗ್ರಹಾರ ಗ್ರಾಮದ ಹಾಲಕ್ಕಿಗಳ ಪ್ರದರ್ಶನ
- ಅಂಕೋಲಾ ತಾಲೂಕಿನ ಹಂದಿಗದ್ದೆ ಗ್ರಾಮದ ಹುಲಿದೇವತಾ ದೇವಸ್ಥಾನದ ಸಂಕ್ರಾಂತಿ ಸೇವೆಯ ಪ್ರದರ್ಶನ

2. **ಮರಾಠಿಗರ ಗುಮಟೆ**

- ಹೊನ್ನಾವರ ತಾಲೂಕಿನ ತೊಳಸಾಣಿ ಗ್ರಾಮದ ಮರಾಠಿಗರ ಪ್ರದರ್ಶನ

3. **ಸಿದ್ದಿ ಜನಾಂಗದ ಗುಮಟೆ**

- ಯಲ್ಲಾಪುರ ತಾಲೂಕಿನ ಬೀಗಾರ ಗ್ರಾಮದ ಸಿದ್ದಿಗಳ ಗುಮಟೆ

## ನೆರವು

(1) ಮಾಸ್ತಿ ಗೌಡ  ಮಠದಕೇರಿ, ಹೊನ್ನಾವರ
(2) ಅನಂತಮೂರ್ತಿ ಗುಣವಂತೆ, ಹೊನ್ನಾವರ
(3) ಯಮುನಾ ಗಾಂವಕರ ಕೆರೆಕೋಣ,ಹೊನ್ನಾವರ
(4) ಸುಬ್ರಾಯ ಶಿವು ಗೌಡ ಅಗ್ರಹಾರ, ಹೊನ್ನಾವರ
(5) ಬಾಬು ಗಿಡ್ಡ ಸಿದ್ದಿ ದೇವಿಗುಡ್ಡ, ಯಲ್ಲಾಪುರ
(6) ಸದಾನಂದ ಮಹಾಲೆ ವಜ್ರಳ್ಳಿ , ಯಲ್ಲಾಪುರ
(7) ದತ್ತಾತ್ರೇಯ ಗಾಂವಕರ ಬೀಗಾರ, ಯಲ್ಲಾಪುರ

# 2. ಸಿದ್ದಿಯರ ಡಮಾಮಿ

## ಪ್ರವೇಶ

ಡಮಾಮಿ ಕುಣಿತ ಸಿದ್ಧಿಯರ ಬದುಕಿನ ಅವಿಭಾಜ್ಯ ಅಂಗ . ವಾದ್ಯ , ಸಾಹಿತ್ಯ , ಬದುಕು ಏಕತ್ರವಾಗಿ ಸಂಘಟಿಸಿದ ಒಂದು ವಿಶಿಷ್ಟತೆಯನ್ನು ನಾವಿಲ್ಲಿ ಗುರುತಿಸಬಹುದು.

'ಡಮಾಮಿ' ಸಿದ್ಧಿಯರ ವಿಶಿಷ್ಟವಾದ ವಾದ್ಯ . ಈ ವಾದ್ಯದೊಡನೆ ಅವರ ಬದುಕಿನ 'ರಿದಂ' ಇದೆ. ಅವರ ಬದುಕಿನ ನೋವು , ನಲಿವು, ತುಂಟತನ ಮತ್ತು ತೀವ್ರತೆಯನ್ನು , ಆಧ್ಯಾತ್ಮಿಕ ಅನುಸಂಧಾನವನ್ನು ಈ ವಾದ್ಯ ಮತ್ತು ಇದರೊಡನೆ ಸೃಷ್ಟಿಯಾದ ಸಾಹಿತ್ಯದಲ್ಲಿ ಕಾಣಬಹುದು. ಡಮಾಮಿ ಕುಣಿತದ ಸಾಹಿತ್ಯ , ಅವರ ಬದುಕಿನ ಚರಿತ್ರೆ : ಒಂದು ಭಾಷ್ಯ ಸಹ ಹೌದು.

ಮಾನವನ ಕ್ರೌರ್ಯಕ್ಕೆ ಸಾಕ್ಷಿಯಾಗಿರುವ ಬದುಕು ಸಿದ್ಧಿಯರದು. ಇವರು ಮೂಲತಃ ಆಫ್ರಿಕಾದ ತಾಂಜಾನಿಯಾದ 'ಜಂಬೇಸಿ' 'ನ್ಯಾಸ'ದ ಸುತ್ತ ಬದುಕಿದವರು ಎನ್ನಲಾಗಿದೆ. ಅರಬರು ಮತ್ತು ಪೋರ್ಚುಗೀಸರು ನರಬೇಟೆ ಮಾಡಿದ ಮುಖ್ಯ ಪ್ರದೇಶಗಳು ಇವು. ಅಲ್ಲಿಯ 'ಶಿದಿಮಾ' ಎಂಬ ಬುಡಕಟ್ಟು ಜನಾಂಗಕ್ಕೆ ಸೇರಿದ ಇವರನ್ನು ಬಿಳಿಯರು ಹಿಡಿದು ತಂದು ಹಿಂಸಿಸಿದರು. ಬಿಳಿಯರಿಂದ ಗೋವಾ ನೆಲೆಯಲ್ಲಿ ನರಳಿದ ಈ ಸಿದ್ಧಿಗಳು ಬದುಕಿಗಾಗಿ ದಟ್ಟ ಕಾಡನ್ನು ಹೊಕ್ಕು ಉತ್ತರ ಕನ್ನಡದಲ್ಲಿ ನೆಲೆಸಿದರು ಎನ್ನಲಾಗಿದೆ.[1]

ಹೀಗೆ ಉತ್ತರ ಕನ್ನಡದ ಮಲೆಗಳಲ್ಲಿ ವಾಸಿಸಿದ ಅವರು ಇಲ್ಲಿಯ ಜನರ ಬದುಕಿನೊಂದಿಗೆ ಹೊಂದಿಕೊಂಡರು. ಸಾಮಾಜಿಕ ಬದುಕಿನಲ್ಲಿ ಆಳುವ ಯಜಮಾನರ ಸಂಸ್ಕೃತಿಯನ್ನು ಅನುಕರಿಸಿದರು, ಅವರ ಮಾತು ಕಲಿತರು , ಹಾಡು ಕಲಿತರು, [3] ಮತಾಂತರಗೊಂಡು ಹಿಂದು , ಮುಸ್ಲಿಂ , ಕ್ರಿಶ್ಚಿಯನ್ ಸಿದ್ಧಿಗಳಾದರು. ಆದರೆ ಅಂತರಂಗಿಕವಾಗಿ ಅವರೆಲ್ಲ ಒಂದಾಗಿಯೇ ಉಳಿದರು. ಈ ಮೂರೂ ಮತಗಳಿಗೆ ಸೇರಿದ ಸಿದ್ದಿಯರಲ್ಲಿ ಹೆಣ್ಣುಗಳ ಕೊಡುಕೊಳ್ಳುವಿಕೆ ಇದೆ. ಹೀಗೆ ಆಂತರಂಗಿಕವಾಗಿ ಒಂದಾಗಿಯೇ ಉಳಿದ ಸಿದ್ದಿಯರಲ್ಲಿ ಡಮಾಮಿ ಕುಣಿತ ಇದೆ. ಡಮಾಮಿ ಕುಣಿತದಲ್ಲಿ ತಮ್ಮ ಮತ , ಪಂಥ, ಗುಲಾಮತನ ಎಲ್ಲವನ್ನೂ ಮರೆತು ಅವರು ಗುಂಪಾಗಿ ಕುಣಿಯುತ್ತಾರೆ. ಗಂಡಸರು , ಹೆಂಗಸರೆಲ್ಲರೂ ಈ ಕುಣಿತದಲ್ಲಿ ಸಮಾನವಾಗಿ ಪಾಲ್ಗೊಳ್ಳುತ್ತಾರೆ, ಡಮಾಮಿ ಹಾಡುಗಳನ್ನು ಒಟ್ಟಾಗಿ ಹಾಡುತ್ತಾರೆ. ಹೆಂಗಸರು ಸಹ ಡಮಾಮಿ ವಾದ್ಯವನ್ನು ನುಡಿಸುವುದುಂಟು. ಡಮಾಮಿ ಕುಣಿತ ಸಿದ್ದಿಯರ ಆಚರಣೆಗೆ ಸಂಬಂಧಿಸಿದ ನೃತ್ಯವೂ ಹೌದು. ಪಿತೃಗಳ ಅವಾಹನೆಗಾಗಿ ಈ ಕುಣಿತ ನಡೆಯುತ್ತದೆ.

ಹೀಗೆ ಅವರ ಆಂತರಿಕ ಬದುಕನ್ನು ತ್ರಸ್ತವಾಗಲು ಬಿಡದೇ , ಸಮೂಹದ ಒಗ್ಗಟ್ಟನ್ನು ಕಾಪಾಡಿಕೊಳ್ಳಲು 'ಡಮಾಮಿ ಕುಣಿತ' ಸಿದ್ದಿಗಳಿಗೆ ನೆರವಾಗಿದೆ.

## ಡಮಾಮಿ ವಾದ್ಯ

ಜಿಲ್ಲೆಯ ಉಳಿದ ಯಾವ ಬುಡುಕಟ್ಟುಗಳಲ್ಲಿಯೂ ಕಂಡುಬರದ ವಾದ್ಯ ಇದು . ಡೋಲಿನಂತಿರುವ , ಮರದ ಎರಡೂ ಕಡೆ ತೆರೆದ ಬಾಯಿಗೆ ಕಾನಕುರಿ ಚರ್ಮ ಹದ ಮಾಡಿ ಸುತ್ತಿ ಎರಡೂ ಕೈಗಳಿಂದ ಇದನ್ನು ನುಡಿಸಲಾಗುತ್ತದೆ. ಹಾಗೆ ನುಡಿಸಿದಾಗ 'ಡುಂಟುಕು' ಎನ್ನುವ ನಾದ ಅದರಿಂದ ಬರುತ್ತದೆ . ಏರು ಶ್ರುತಿಯ ಮತ್ತು ತೀವ್ರ ನಡಿಗೆಯ ಲಯವುಳ್ಳ ಡಮಾಮಿ ವಾದ್ಯದ ನಾದಕ್ಕೆ ತಕ್ಕಂತೆ ಸಿದ್ದಿಗಳ ಸಾಹಿತ್ಯ, ನರ್ತನ ಮೇಳೈಸುತ್ತದೆ.

## ಪ್ರದರ್ಶನ

ಈ ನೃತ್ಯವನ್ನು ಹೆಂಗಸರೇ ಕುಣಿಯುವುದುಂಟು, ಹೆಂಗಸರು ಮತ್ತು ಗಂಡಸರಿಬ್ಬರೂ ಕುಣಿಯುವುದೂ ಉಂಟು. 4 ಮಾತ್ರಾ ಕಾಲದಲ್ಲಿ 5 ಪೆಟ್ಟುಗಳಂತೆ (1–2–3, 4,5) ವಾದ್ಯದ ನುಡಿತ ನಡೆಯುವುದು. ಡಮಾಮಿ ಜತೆ ತಾಳ ವಾದ್ಯವೂ ಇರುತ್ತದೆ.

ಹಿಮ್ಮೇಳದವರು ನರ್ತಕರ ಹಿಂದು ಕಡೆ ಕುಳಿತಿರುವರು. ಮುಖ್ಯ ಹಾಡುಗಾರ್ತಿ ಒಂದು ಸೊಲ್ಲನ್ನು ಹಾಡುತ್ತಿದ್ದಂತೆ ಜತೆಗಿರುವ 'ಕೋರಸ್'ನವರು ಅದನ್ನು ಪುನಃ ಹಾಡುತ್ತಾರೆ . ಪಲ್ಲವಿಗಳು ಪುನಃ ಪುನಃ ಹಾಡಲ್ಪಡುತ್ತವೆ. ಹಾಡಿನ ಲಯದ ತೀವ್ರತೆಗನುಗುಣವಾಗಿ ಬಲಗಾಲ ಮುಮ್ಮಡಿ , ಎಡಗಾಲಿನ ಹಿಮ್ಮಡಿಯ ಹಿಂದೆ ಬಡಿಯುತ್ತಿರುತ್ತದೆ. ಕೈಯನ್ನು ವಿಶಾಲವಾಗಿ ಬೀಸಲಾಗುತ್ತದೆ. ಮೈಯ ಓಲಾಡಿಸುವಿಕೆ, ಕುಕ್ಕುರುಗಾಲಿನಲ್ಲಿ ಕುಳಿತುಕೊಳ್ಳುವುದು, ಎದ್ದು , ಕುಂತು ನಮಸ್ಕಾರ ಭಂಗಿಯಲ್ಲಿ ಕುಣಿಯುವುದು, ಸೊಂಟದ ಮೇಲೊಂದು ಕೈಯಿಟ್ಟು , ಇನ್ನೊಂದು ಕೈಯನ್ನು ಮೇಲೆತ್ತಿ ಬುಗುರಿಯಂತೆ ತಿರುಗುವುದು –ಹೀಗೆ ಸ್ವಚ್ಛಂದ ಎನಿಸುವ, ಇಡೀ ದೇಹವನ್ನು ಗಾಳಿಗೆ ತೆರೆದಿರುವ , ಅಲ್ಪ ಸ್ವಲ್ಪ ಹಾಡಿನ ಅಭಿನಯವೂ ಇರುವ ಕುಣಿತ ಇದು. ಹೇಗೆಯೇ ಕುಣಿದರೂ, ಅಂದರೆ ನಿರ್ದಿಷ್ಟ ಆಂಗಿಕ ವಿನ್ಯಾಸ ಇಲ್ಲದಿದ್ದರೂ ಎಲ್ಲಿಯೂ 'ಲಯ' ತಪ್ಪದ ಕುಣಿತವಿದು.

ಸಿದ್ದಿಗಳು ತಮಗೆ ಸಂತೋಷವಾದಾಗಿನ ಸಂದರ್ಭದಲ್ಲಿ , ಹಬ್ಬಗಳಲ್ಲಿ ಹೀಗೇ ಬೇರೆ ಬೇರೆ ಸಂದರ್ಭಗಳಲ್ಲಿ ಡಮಾಮಿ ಕುಣಿಯುತ್ತಾರಾದರೂ ಮುಖ್ಯವಾಗಿ ಪಿತೃಗಳ ನೆನಪಿಗೆ , ಅವರ ಅವಾಹನೆಗೆ ಇದನ್ನು ಕುಣಿಯುತ್ತಾರೆ. ಕುಣಿ ಕುಣಿದು ಕೆಲವರು ಎಚ್ಚರ ತಪ್ಪಿದಾಗ ಪಿತೃ ಅವಾಹನೆ ಆಯಿತೆಂದು ಅವರು ನಂಬುತ್ತಾರೆ .

## ಕೆಲವು ಡಮಾಮಿ ಹಾಡುಗಳು

1. ಸಿದ್ದಿ ಸಾಯ್ಬೋರೆ ನಿಸಾಣೆ
ಲಾಗಿಲೊ ಧುಮಡೋ
ಲಯಾಕಿಣಿ ಚೋ
ಸಿದ್ದಿ ಸಾಯ್ಬೊರೆ

(ಸಿದ್ದಿ ಸಾಯ್ಬನೇ ನಮ್ಮ ಗುರು . ಲಯ ವಾದ್ಯದ 'ಧುಮಡೋ' (ಭಾರಿಸಲು) ನಾವು ಆರಂಭಿಸಿದೆವು.)

ಡಮಾಮಿಯಲ್ಲಿ ಹೆಣೆಯುತ್ತ ಹೋಗುವ ನೂರಾರು ಹಾಡುಗಳಿವೆ ಆದರೆ ಆರಂಭದಲ್ಲಿ ಮಾತ್ರ ಈ ಹಾಡನ್ನು ಅವರು ಹಾಡುತ್ತಾರೆ. ಸಿದ್ದಿಗಳಲ್ಲಿ 'ಸಯಿದ್' ಎಂಬ ಪದವಿದೆ 'ಸಯಿದ್'ನಿಂದ ಸಿದ್ದಿ ಪದ ಬಂದಿರುವ ಬಗ್ಗೆ ಕೆಲ ವಿದ್ವಾಂಸರು ಊಹಿಸಿದ್ದು ಉಂಟು. ಈ 'ಸಯಿದ್' ಪದ 'ಸಾಯ್ಬೊ' ಪದಕ್ಕೆ ಸಮನಾರ್ಥಕವೂ ಹೌದು.

2. ಯೋ ಯೋ ಪಾವ್ಲಿನಾ
ಯೋ ಯೋ ಪಾವ್ಲಿನಾ
ಮಜಾ ಬರೋಬರ ಯವ್ಚೆನಾ
ಭಟಾಚೆ ಗರ ಜಾವ್ಚೆನಾ
ಶೆಳೆಲೆ ಗೊಟೊ ಜವ್ಚೆನಾ
ಅಮ್ಗೆ ವಸುನ, ಜಮ್ಗೆವಸುನ
ಸುಪಾಲೆ ಡ್ಯಾಮ್ ದಾಕ್ಕೆತಾ.

(ಪಾವ್ಲಿನಾ ನೀನು ನನ್ನ ಸಂಗಡ ಬರುವುದಿಲ್ಲವೇನು . ನಾನು ನಿನ್ನನ್ನು ಭಟ್ಟರ ಮನೆಗೆ ಒಯ್ಯುವುದಿಲ್ಲ. ಅಲ್ಲಿ 'ತಣ್ಣೆನ್ನ' ಉಣ್ಣಿಸುವುದಿಲ್ಲ ಅಮ್ಗೆ , ಜಮ್ಗೆ ಊರುಗಳನ್ನು ದಾಟಿ ಸೂಪಾ ಡ್ಯಾಂ ತೋರಿಸ್ತೀನಿ)

ಇಲ್ಲಿ ಒಡೆಯನ ಮನೆಯ ಜೀತಕ್ಕಿದ್ದು, ಹಳಸಿದ ಅನ್ನ ತಿಂದು ಬೇಸರಗೊಂಡ ನಲ್ಲೆಗೆ, ನಲ್ಲ ಹೊಸ ಕೆಲಸ , 'ಕಾರ್ಮಿಕತನ' ತಂದು ಕೊಟ್ಟ ಬಿಡುಗಡೆಯನ್ನೂ, ಸಂತಸವನ್ನೂ ಹಂಚಿಕೊಳ್ಳುತ್ತಿದ್ದಾನೆ. ಸ್ವಂತ ಗಳಿಕೆಯ ಸಂತಸ ಇಲ್ಲಿ ಎದ್ದು ಕಾಣುತ್ತಿದೆ.)

3. ಬಾರೆ ಮಳಿಯೇ ಭೂಮಿ ಮೈನೆ ಇಳಿಯೆ
ಬಾರೆ ಮಳಿಯೇ ಹೊಳೆ ತುಂಬ ಹರಿಯೆ
ಗಡ ಗಡ ಗಳಲಿಸಿ ಸಳಸಳ ಸಳಲಿಸಿ
ಮಳೆ ಸುರಿಯೆ ಬಡತನ ದಿನ ಕಳಿಯೆ*

## ವಿಶ್ಲೇಷಣೆ

ಸೂಪರ್ ನ್ಯಾಚುರಲ್ ಲೋಕದ ಜತೆ ಸಂವಹನ ಮಾಡುವಾಗ ಹೆಚ್ಚು ನಾಟಕೀಯತೆ ಕಂಡುಬರುವುದು ಸಹಜ ಸಂಗತಿಯೇ ಆಗಿದೆ. ಬಹುತೇಕವಾಗಿ ಎಲ್ಲ ಜನಾಂಗಗಳಲ್ಲಿಯೂ ಮೈಮೇಲೆ ದೈವ ಬರಿಸುವ ಕ್ರಿಯೆಯಲ್ಲಿ ಹೆಚ್ಚು ನಾಟಕೀಯ ಚಲನೆಯನ್ನು, ಒಂದು ಬಗೆಯ ಅತಿ ಎನಿಸುವ ಅಂಗಿಕ ಬಳಕೆಯನ್ನು, ದೇಹವನ್ನು ಹಿಗ್ಗಿಸಿ ಸಾಮಾನ್ಯರಿಗಿಂತ ಬೃಹತ್ ಅನ್ನಿಸುವಂತೆ ಮಾಡುವ ಕ್ರಿಯೆಯನ್ನು ನಾವು ಕಾಣಬಹುದು. "ಈ ನೃತ್ಯವನ್ನು ನಾವು ನಮ್ಮ ಹಳೆಯವರಿಗೆ , ನಾವು ಅವರ ಕಸುಬನ್ನು ಮುಂದುವರಿಸುತ್ತಿದ್ದೇವೆ ಎಂದು ತಿಳಿಸುವುದಕ್ಕೆ ಮಾಡುತ್ತೇವೆ."[2] – ಎಂಬ ಬಾಬು ಸಿದ್ಧಿಯ ಮಾತು ವಲಸಿಗ ಆಫ್ರಿಕನ್ನರು ಸಂಗೀತದ ಮೂಲಕವೇ ಒಕ್ಕಟ್ಟನ್ನು ಕಾಪಾಡಿಕೊಳ್ಳುವ , ಸಮುದಾಯದ ಸಂಸ್ಕೃತಿ , ಸ್ಮೃತಿ ಉಳಿಸಿಕೊಳ್ಳುವ ವ್ಯವಸ್ಥೆ ಮಾಡಿಕೊಳ್ಳುತ್ತಾರೆ ಎಂಬ ಅಭಿಪ್ರಾಯಕ್ಕೆ ಪುಷ್ಟಿ ನೀಡುತ್ತದೆ.

'ಮಳೆ ಬರಲಿ' ಅನ್ನುವ ಹಾಡಿಗೆ ಸಿದ್ಧಿಗಳು ಮೈಮುರಿಯುವ, ಕೈಯನ್ನು ಹೆಡೆಯಂತೆ ಎತ್ತಿ ತಿರುಗುವ ಸೊಂಟದ ಮೇಲ್ಭಾಗವನ್ನು ತಿರುಗಿಸುವ ಗಾಳಿ , ಗುಡುಗು, ಮಳೆ ಇವೆಲ್ಲವನ್ನು ಆಂಗಿಕವಾಗಿ ಸೃಜಿಸುವ ಕ್ರಿಯೆಯನ್ನು ಮಾಡುತ್ತಾರೆ . ಭಾವ ತೀವ್ರತೆಗೆ ಹೆಚ್ಚು ಆಂಗಿಕದ ಬಳಕೆಯಾಗುತ್ತದೆ. ಅದರಲ್ಲೂ ಸಿದ್ಧಿಗಳಲ್ಲಿ ಅಂಗಿಕ ಭಾಷೆ ಉಳಿದ ಜನಾಂಗಗಳಿಗಿಂತ ತುಸು ಹೆಚ್ಚು. ಅವರ ಬಾಯಿಗಿಂತ ದೇಹವೇ ಹೆಚ್ಚು ಮಾತನಾಡುವುದನ್ನು, ಸಹಜವಾಗಿ ಅವರು ಸಂಭಾಷಿಸುವಾಗ ಸಹ ಗಮನಿಸಲು ಸಾಧ್ಯ . ಈ ಡಮಾಮಿಯನ್ನು ಅವರು ಬೆಳ್ಳಂಬೆಳತನಕ ಕುಣಿಯುವರು. ಆಗ ತುಂಡು ತುಂಡು ಪದ್ಯಗಳು ಬಳಕೆಯಾಗುತ್ತವೆ, ಆ ಪದ್ಯಗಳು ಆಶು ಪದ್ಯಗಳಾಗಿರುವುದೂ ಉಂಟು.

ನೃತ್ಯ ಒಂದು ಸಂಪ್ರದಾಯದಂತೆ ಭಾಷೆಯೂ , ಸಂಸ್ಕೃತಿಯೂ ಆಗಿರುತ್ತದೆ . ದೈಹಿಕ ದುಡಿಮೆಯ ಪರಾಕಾಷ್ಠೆಗೆ ತಲುಪಿದ ಸಿದ್ಧಿಗಳು , ಕಾಡಿನ ದುರ್ಗಮ ಬದುಕನ್ನು ಎದುರಿಸಲು , ದೇಹದ ಕಸುವನ್ನು ಹೆಚ್ಚಿಸಿಕೊಳ್ಳುವ , ಮಾಂಸ ಖಂಡಗಳ ಚಲನೆಯ ಮೂಲಕವೇ 'ಶಮನ' ಹೊಂದುವ ಪ್ರಯತ್ನ ಮಾಡುವುದನ್ನು ಈ ನೃತ್ಯದ ಚಲನೆಗಳಲ್ಲಿ ನಾವು ಕಾಣಬಹುದು. "We are a people of dance , Whose feet grow strong by beating upon the ground".[3]ಎಂಬ ಮಾತು ಸಿದ್ದಿಗಳಬದುಕಿಗೆ ತೀರ ನಿಕಟವಾದ ಭಾಷ್ಯ ಬರೆಯುತ್ತದೆ.

ತ್ರಸ್ತ ಬದುಕು, ವಿಲಂಬಿತ ಲಯವನ್ನು ಇಷ್ಟ ಪಡುವುದಿಲ್ಲ . ಗಂಭೀರ ಪದಗತಿಯಾಗಲೀ, ಪಾದಗತಿಯಾಗಲೀ ಅಂತಹ ಬದುಕಿಗೆ ಸಾಧ್ಯವಾಗುವುದಿಲ್ಲ. ಅದಕ್ಕೆಂದೇ ಸಿದ್ಧಿಗಳಿಗೆ ಇಲ್ಲಿಯ ಯಕ್ಷಗಾನಕ್ಕಿಂತ, ಬಯಲು ಸೀಮೆಯ 'ಸಂಗ್ಯಾ ಬಾಳ್ಯಾ' ತುಂಬ ರುಚಿಯುಳ್ಳ ಪ್ರದರ್ಶನವಾಗಿ ಕಂಡಿರಬೇಕು. ಇಂದಿಗೂ ಕೆಲವಡೆ

ಸಂಗ್ಯಾ ಬಾಳ್ಯಾ ಸಣ್ಣಾಟವನ್ನು ಅವರು ಪ್ರತಿವರ್ಷ ಆಚರಣೆಯಂತೆ ಪ್ರದರ್ಶಿಸುತ್ತಾರೆ . ತೀವ್ರ ತಮವಾದ ಲಯ, ಏರುದನಿಯ ಅದರ ಹಾಡು ಹಾಗೂ ಸರಳತೆ ಸಿದ್ದಿಗಳಿಗೆ ಪ್ರಿಯವಾದದ್ದು .

ಅವರ ಪ್ರದರ್ಶನದ ಹಿನ್ನೆಲೆಯಲ್ಲಿ ತಾವು ಆಫ್ರಿಕದ ಪ್ರದರ್ಶನ ಕಲೆಗಳ , ನೀಗ್ರೋ ಸಂಗಿತದ ಎಲ್ಲ ಛಾಯೆಗಳನ್ನೂ ಇಂದಿಗೂ ಸ್ಪಷ್ಟವಾಗಿ ಗುರುತಿಸಬಹುದು. "ಆಫ್ರಿಕದ ಕರಿಯರ ರಂಗ ಪ್ರದರ್ಶನ , ಚಲನೆ ಹಾಗೂ ಹಾವಭಾವವನ್ನು ಒಳಗೊಂಡಿರುವ ಎಲ್ಲ ಸಾಮಾಜಿಕ ಅಭಿವ್ಯಕ್ತಿ ಪ್ರಕಾರಗಳನ್ನು ಒಳಗೊಂಡಿರುತ್ತದೆ . ಸಂಗೀತ , ನೃತ್ಯ ಮತ್ತು ವಾದ್ಯ ಕರಿಯರ ಸಂವೇದನೆಯ ಭಾಗವಾಗಿದೆ. ಅವರ ಭಾಷೆಯೇ 'ಡ್ರಮ್' ಗಳ ಲಯ ವಿನ್ಯಾಸದಂತೆ ಇರುವುದು."[4]

'ಆಫ್ರಿಕನ್ ಸಂಗೀತ ಬಹು ಲಯಗಳಿಂದ ಕೂಡಿದ್ದು ಸಂಘರ್ಷಿಸುವ ಧ್ವನಿ ವಿನ್ಯಾಸಗಳ ನೆಯ್ಗೆಯಾಗಿದೆ.'[5] ಧ್ವನಿ ಪ್ರತಿಧ್ವನಿ – ಪ್ರಧಾನ ಗಾಯಕನನ್ನು ಅನುಸರಿಸಿ ವೃಂದದವರ ಹಾಡುವಿಕೆ , ಲಯಬದ್ಧ ಚಪ್ಪಾಳೆ ಮತ್ತು ಪಾದಗಳ ಬಡಿತ , ತಾಳಗತಿಯ ಲಯ , ಏರು ಶ್ರುತಿಯ, ತೀವ್ರ ಲಯದ ಆಶು ವಿಸ್ತರಣೆಯ ಪದ್ಯಗಳು , ಒಟ್ಟಾರೆ ಹುರುಪಿನಿಂದ ಕೂಡಿದ ಲಯ ಬದ್ಧತೆ ಇವರ ಪ್ರದರ್ಶನದ ಮುಖ್ಯ ಅಂಶಗಳು . "ನಿಗ್ರೋ ಸಂಗೀತ, ತೃತೀಯ ಹಾಗೂ ಸಪ್ತಮ ಸ್ವರಗಳ ನೈಜನಾದಕ್ಕಿಂತ ಅರ್ಧ ಇಳಿಸಿದ ಸ್ವರಗಳಿಗೆ ಅಳವಡಿಸಲ್ಪಟ್ಟಿರುತ್ತದೆ"[6] ಎಂಬ ಮಾತಿದೆ. ಈ ಸ್ವರಗಳನ್ನು 'ನೀಲ ಸ್ವರ' ಗಳೆಂದು ಕರೆಯುತ್ತಾರೆ. ಸಿದ್ದಿಯರ ಹಾಡಿನ ಸ್ವರಗಳನ್ನು ಈ ಹಿನ್ನೆಲೆಯಲ್ಲಿ ಗುರುತಿಸಲು ಅಧ್ಯಯನ ನಡೆಸಬಹುದಾಗಿದೆ.

## ಆಧಾರ ಪಠ್ಯ


1. ಬೋರಲಿಂಗಯ್ಯ.ಹಿ.ಚಿ. : ಸಿದ್ದಿಯರ ಸಂಸ್ಕೃತಿ : ಸಾಹಿತ್ಯ ಅಕಾಡೆಮಿ ಬೆಂಗಳೂರು : 1993
2. ಬಾಬು ಗಿಡ್ಡ ಸಿದ್ದಿ : ಸಂದರ್ಶನ : ಶ್ರೀಪಾದ ಭಟ್ : ಯಲ್ಲಾಪುರ :
3. Sayed Ali Shafee: song , Dance and Drum; Theatrics of African and black drama: Indian journal or American stidies vol.26 . No.2. summer 1996 : American studies Research Center ISSN.p.36,37.
4. ಅದೇ
5. ಅದೇ
6. ನಿರಂಜನ (ಸಂ) ಜ್ಞಾನ ಗಂಗೋತ್ರಿ ಕಿರಿಯರ ವಿಶ್ವ ಕೋಶ – 5 ಕಲೆ ಸಾಹಿತ್ಯ : ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ ಬೆಂಗಳೂರು :1973 : ಪು. 336


## ಪ್ರದರ್ಶನ ಪಠ್ಯ

- ದೇವರ ಕಲ್ಲಳ್ಳಿ ಮಂಚಿಕೇರಿ ಸಿದ್ದಿಗಳ ಪ್ರದರ್ಶನ : ವನವಾಸಿ ಉತ್ಸವ ಶಿರಸಿ
- ದೇವಿ ಗುಡ್ಡದ ಬಾಬುಗಿಡ್ಡ ಸಿದ್ದಿ ಮತ್ತು ಸಂಗಡಿಗರ ಪ್ರದರ್ಶನ ಯಲ್ಲಾಪುರ

## ನೆರವು

1. ಬಾಬು ಗಿಡ್ಡ ಸಿದ್ದಿ, ದೇವಿ ಗುಡ್ಡ, ಬಾಳಗಿ ಮನೆ , ಯಲ್ಲಾಪುರ
2. ಅಕ್ಕಾಣಿಬಾಬು ಸಿದ್ದಿ, ದೇವಿ ಗುಡ್ಡ, ಬಾಳಗಿ ಮನೆ , ಯಲ್ಲಾಪುರ
3. ಪಾರ್ವತಿ ಪಾಂಡುರಂಗ ಸಿದ್ದಿ, ದೇವಿ ಗುಡ್ಡ, ಬಾಳಗಿ ಮನೆ , ಯಲ್ಲಾಪುರ
4. ಗಣಪತಿ ಸಣ್ಣ ಸಿದ್ದಿ, ದೇವಿ ಗುಡ್ಡ, ಬಾಳಗಿ ಮನೆ , ಯಲ್ಲಾಪುರ
5. ಕೃಷ್ಣ ನಾರಾಯಣ ಸಿದ್ದಿ, ದೇವಿ ಗುಡ್ಡ, ಬಾಳಗಿ ಮನೆ , ಯಲ್ಲಾಪುರ
6. ಯಮುನಾ ಗಾಂವಕರ್, ಕಾರವಾರ
7. ವಿಠಲಭಂಡಾರಿ ಕೆರೆಕೋಣ ಹೊನ್ನಾವರ
8. ಗಣಪತಿ ಭಾಗ್ವತ್, ಯಲ್ಲಾಪುರ